ಈ) 1996-97ನೇ ಸಾಲಿನಲ್ಲಿ ನೀಡಲಾದ ಅನುದಾನವನ್ನು ಈ ಕೆಳಕಂಡಂತೆ ಉಪಯೋಗಿಸಲಾಗಿದೆ.

ವೇತನ ಮತ್ತು ಭತ್ಯೆ	-	9,92,042-00
ವೈದ್ಯಕೀಯ ವೆಚ್ಚದ ಮರು ಪಾವತಿ	-	920-00
ಪ್ರಯಾಣ ಭತ್ಯೆ	-	58,950-00
ಕಛೇರಿ ಇತರ ವೆಚ್ಚಗಳು (ಪಿಠೋಪಕರಣಗಳು, ವಾಹನ ಖರೀದಿ, ಗಣಕ ಯಂತ್ರ ಮತ್ತು ಸಂಬಂಧಿತ ಉಪಕರಣಗಳ ಖರೀದಿ ಇತ್ಯಾದಿ)	-	62,36, 274-00
1996-97ನೇ ಸಾಲಿನ ಕೊನೆಯಲ್ಲಿ ಉಳಿದ ಮೊತ್ತವನ್ನು 1997-98ನೇ ಸಾಲಿನ ದೈನಂದಿನ ಖರ್ಚಿಗೆ ಉಪಯೋಗಿಸಲಾಗಿದೆ.	-	27,11,814-00
ಒಟ್ಟು	-	**100,00,000-00**

ರಾಜ್ಯ ಪ್ರೌಢಶಿಕ್ಷಣ ಮಂಡಳಿ ನಡೆಸುವ ವಾಣಿಜ್ಯ ಪರೀಕ್ಷೆಗಳು

2909 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪ್ರೌಢ ಶಿಕ್ಷಣ ಮಂಡಳಿ ಯಾವ ಯಾವ ವಾಣಿಜ್ಯ ಪರೀಕ್ಷೆಗಳನ್ನು ನಡೆಸುತ್ತಿದೆ?

ಆ) ಈ ಪರೀಕ್ಷೆಗಳಲ್ಲಿ ಯಾವ ಯಾವ ಪರೀಕ್ಷೆಗಳನ್ನು ವರ್ಷಕ್ಕೆ ಎರಡು ಬಾರಿಗೆ ನಡೆಸುತ್ತಿದೆ?

ಇ) ಶೀಘ್ರಲಿಪಿ ಬೆರಳಚ್ಚು ಹಾಗೂ ಇತರೆ ಎಲ್ಲಾ ಪರೀಕ್ಷೆಗಳನ್ನು ವರ್ಷಕ್ಕೆ ಒಂದೇ ಬಾರಿಗೆ ಅಂದರೆ ನವೆಂಬರ್‌ನಲ್ಲಿ ನಡೆಸಲು ಸರ್ಕಾರವು ಉದ್ದೇಶಿಸಿದೆಯೆ?

ಈ) ಇದರಿಂದ ಉತ್ತಮ ಶಿಕ್ಷಣ ಹಾಗೂ ಪರೀಕ್ಷಾ ವೆಚ್ಚ ಕಡಿಮೆಯಾಗುವುದಿಲ್ಲವೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಒಟ್ಟು 35 ಪರೀಕ್ಷೆಗಳು (ಪಟ್ಟಿ ಲಗತ್ತಿಸಿದೆ)

ಆ) 1) ಕನ್ನಡ ಹಾಗೂ ಆಂಗ್ಲ ಬೆರಳಚ್ಚು ಪ್ರಥಮ ಮತ್ತು ಪ್ರೌಢ ದರ್ಜೆ

2) ಕನ್ನಡ ಪ್ರಥಮ, ಪ್ರೌಢ ಮತ್ತು ಪ್ರವೀಣ ದರ್ಜೆ ಶೀಘ್ರಲಿಪಿ ಮತ್ತು ಆಂಗ್ಲ ಪ್ರಥಮ, ಮಧ್ಯಮ, ಪ್ರೌಢ ಮತ್ತು ಪ್ರವೀಣ ದರ್ಜೆ ಶೀಘ್ರಲಿಪಿ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

COMMERCE EXAMINATION

SUBJECTS & GRADES

1.	English Typewriting Proficiency (Only May Exam)	01	XYZ	May and November Examination
2.	English Typewriting Senior	03	XY	
3.	English Typewriting Junior	05	XY	
4.	Kannada Typewriting Proficiency (Only May Exam)	06	XYZ	
5.	Kannada Typewriting Senior	08	XY	
6.	Kannada Typewriting Junior	10	XY	
7.	English Shorthand Proficiency	11	XYZ	
8.	English Shorthand Senior	13	XYZ	
9.	English Shorthand Intermediate	14	XY	
10.	English Shorthand Junior	15	XY	
11.	Kannada Shorthand Proficiency	16	XYZ	
12.	Kannada Shorthand Senior	18	XYZ	
13.	Kannada Shorthand Junior	20	XY	
14.	Book-Keeping and Accountancy Senior	21	XY	May Exam
15.	Book-Keeping and Accountancy Junior	22	XY	
16.	Elements of Commerce Senior	23	XY	
17.	Elements of Commerce Junior	24	XY	
18.	Office Practice and Procedure Senior	25	X	
19.	Office Practice and Procedure Junior	26	XY	
20.	Salesmanship and Marketing Senior	27	X	
21.	Salesmanship and Marketing Junior	28	X	
22.	Banking Practice Senior	29	X	
23.	Banking Practice Junior	30	X	

24.	Proof Readers Work Senior	31		
25.	Proof Readers Work Junior	32		
26.	Machine Work Senior	33		
27.	Machine Work Junior	34		Only Nov.
28.	Compositors Work Senior	35		Exam.
29.	Compositors Work Junior	36		
30.	Book Binding Senior	37		
31.	Book Binding Junior	38		
32.	Kacheri Adalitha Senior	39	X	
33.	Kacheri Adalitha Junior	40	X	Only
34.	Insurance Practice Senior	41	X	May
35.	Insurance Practice Junior	42	X	Exam.

ಪದವಿ ಪೂರ್ವ ಶಿಕ್ಷಣಕ್ಕೆ ಪ್ರವೇಶ

2910 - ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರಿ ಹಾಗೂ ಸಂಯುಕ್ತ ಕಾಲೇಜುಗಳಲ್ಲಿ ಪದವಿ ಪೂರ್ವ ಶಿಕ್ಷಣಕ್ಕೆ ಪ್ರವೇಶವನ್ನು ಸ್ಥಗಿತಗೊಳಿಸಲು ಸರ್ಕಾರ ನಿರ್ಧರಿಸಿದೆಯೇ?*

ಆ) *ಹಾಗಿದ್ದಲ್ಲಿ, ಇದರಿಂದ ರಾಜ್ಯದಲ್ಲಿ ಒಟ್ಟು ಪದವಿ ಪೂರ್ವ ಕಾಲೇಜುಗಳಿಗೆ ಪ್ರವೇಶವನ್ನು ಸ್ಥಗಿತಗೊಳಿಸಿದಂತಾಗುತ್ತದೆಯಲ್ಲವೇ?*

ಇ) *ಇದಕ್ಕೆ ಸರ್ಕಾರವು ಪರ್ಯಾಯ ವ್ಯವಸ್ಥೆಯನ್ನು ಯೋಚಿಸಿದೆಯೇ? ಹಾಗಿದ್ದಲ್ಲಿ ಪೂರ್ಣ ವಿವರ ನೀಡುವುದು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಶಿಕ್ಷಣ ಸಚಿವರು) :

ಅ) ಹೌದು (ತಾತ್ವಿಕವಾಗಿ)

ಆ) ಇಲ್ಲಾ. (ಸದ್ಯಕ್ಕೆ 14 ಸರ್ಕಾರಿ ಪದವಿ ಕಾಲೇಜುಗಳಿಂದ ಮಾತ್ರ ಪದವಿ ಪೂರ್ವ ತರಗತಿಗಳನ್ನು ಬೇರ್ಪಡಿಸಲಾಗಿದೆ).

ಇ) ಹೌದು. ವಿವರಗಳನ್ನು ಅನುಬಂಧದಲ್ಲಿ ಇರಿಸಿದೆ.